ಉದ್ದಕ್ಕೂ ಕೇಳಿಸುತ್ತದೆ. ಹಾಗೆಯೇ ಇವರ ಬದುಕಿನಲ್ಲಿ ಬಂದುಹೋದ ಹೆಣ್ಣುಮಕ್ಕಳೂ ಉದ್ದಕ್ಕೂ ಮಾತನಾಡಿದ್ದಾರೆ ಎಂದೇ ಅನ್ನಿಸುತ್ತದೆ. ಸುಕನ್ಯಾ ಜೊತೆ ಮದುವೆಯಾಗುವ ನಿರ್ಧಾರ ಮಾಡಿದಾಗ ಮಾತ್ರ ಇವರಿಗೆ ನಾಚಿಕೆಯಾಯಿತು, ಸಂಕೋಚವಾಯಿತು ಎಂದು ರವಿಶಂಕರ್ ಬರೆಯುತ್ತಾರೆ. 'ಎಲ್ಲೆಲ್ಲೋ ಇರುವ ಗೆಳತಿಯರ ವಿವರಗಳನ್ನು ಇವಳ ಬಳಿ ಹೇಳಿಕೊಳ್ಳುವ ಸಂದರ್ಭದಲ್ಲಿ ಕುಗ್ಗಿಹೋದೆ' ಎನ್ನುವ ಉದ್ಗಾರ ಬರುತ್ತದೆ. 'ರಾಗಮಾಲ' ಪ್ರಕಟವಾದಾಗ ರವಿಶಂಕರರ ಪ್ರಾಮಾಣಿಕತೆಯ ಬಗೆಗೆ ಮೆಚ್ಚುಗೆಯ ಮಹಾಪೂರವೇ ಹರಿಯಿತು.

ಕನ್ನಡದ ಇಬ್ಬರು ಪ್ರಸಿದ್ಧ ಲೇಖಕರ ಆತ್ಮಕಥನಗಳ ಕಡೆ ಕಣ್ಣು ಹಾಯಿಸಿ ಮುಂದುವರೆಯುತ್ತೇನೆ. ಒಬ್ಬರು ನನಗೆ ಆತ್ಮೀಯವಾಗಿಯೇ ಪರಿಚಯವಿದ್ದವರು. ಅವರನ್ನು ಕೇಳಿದೆ, 'ಸರ್, ನಿಮ್ಮ ಗೆಳತಿಯರ ಬಗ್ಗೆ ಯಾಕೆ ಬರೆದಿಲ್ಲ. ಆ ವಿವರಗಳಿಲ್ಲದೇ ಇದು ಅಪೂರ್ಣ ಅಲ್ಲವೆ?' ಅವರೆಂದರು, 'ಇಲ್ಲಮ್ಮ ಹಾಗಲ್ಲ, ಆ ಹೆಣ್ಣುಮಕ್ಕಳಿಗೆ ಸಂಕೋಚವೋ ತೊಂದರೆಯೋ ಆಗಬಾರದು ಅಂತ ಬರೆದಿಲ್ಲ'. ಜಾಣತನವನ್ನು ಮೆಚ್ಚಿದೆ, ಆತ್ಮವಂಚನೆಯನ್ನು ಹಳಿದುಕೊಂಡು ಸುಮ್ಮನಾದೆ. ಗಿರೀಶ ಕಾರ್ನಾಡರ 'ಆಡಾಡತ ಆಯುಷ್ಯ'ದಲ್ಲಿ ತಮ್ಮೊಂದಿಗೆ ಸಲಿಗೆಯಿಂದಿದ್ದ ಹೆಣ್ಣುಮಗಳ ಬಗೆಗೆ, ಅವಳಿಂದ ಪಡೆದ ಪ್ರೀತಿಯ ಬಗೆಗೆ ಮೂರುಕಾಸಿನ ಗೌರವವೂ ಇಲ್ಲದಂತೆ ಬರೆದದ್ದನ್ನು ನೋಡಿ, ಗಂಡಿನ ಭಂಡತನದ ಬಗೆಗೆ ಹೇಸಿಗೆಯೇ ಹುಟ್ಟಿತು. ನಟಿ ಹೇಮಾಮಾಲಿನಿಯ ಬಗೆಗೆ ಬರೆಯುವಾಗಲೂ ಇದೇ ಅಹಂಕಾರ. ಎಲ್ಲಾ ಬಿಟ್ಟು ಅಂಥಾ ದಡ್ಡಿಯನ್ನು ಮದುವೆಯಾಗುವ ಪ್ರಸ್ತಾಪ ತನಗೆ ಬಂದಿತ್ತಲ್ಲ ಎನ್ನುವ ಉದ್ಗಾರದಲ್ಲಂತೂ ಗರ್ವದ ತುದಿಯಲ್ಲಿ ನಿಂತು ಅವರು ಮಾತನಾಡುವಂತೆ ಕಾಣಿಸುತ್ತದೆ. ಮದುವೆಯಾಗುವುದು ಬಿಡುವುದು ಬೇರೆಯ ಪ್ರಶ್ನೆ. ಅವಳನ್ನು ಹೀಯಾಳಿಸುವ ಹಕ್ಕು ನಿಮಗಿದೆಯೆ? ಅದೂ ಯಥೇಚ್ಛವಾಗಿ ಅವಳ ಮನೆಯ ಆತಿಥ್ಯವನ್ನು, ಇದೇ ಉದ್ದೇಶ ಅವರಿಗಿರಬಹುದು ಎನ್ನುವುದನ್ನು ಊಹಿಸಿದ ಮೇಲೂ ಸವಿದು?




ಈ ಉದಾಹರಣೆಗಳನ್ನು ಉದ್ದೇಶಪೂರ್ವಕವಾಗಿಯೇ ತೆಗೆದುಕೊಂಡಿದ್ದೇನೆ. ಮೂರು ಕಾರಣಗಳಿಗಾಗಿ. ಒಂದು ಪುರುಷ ಆತ್ಮಕಥನಗಳಲ್ಲಿ ಮಹಿಳೆಯ ಸ್ಥಾನ, ಪಾತ್ರ ಇತ್ಯಾದಿಗಳ ಬಗೆಗೆ ಒಂದು ಸ್ಥೂಲವಾದ ಚೌಕಟ್ಟನ್ನು ಇವು ಕಟ್ಟಿಕೊಡುತ್ತವೆ. ಎರಡನೆಯದು, ಪುರುಷ ಆತ್ಮಕಥನಗಳ ಬಗೆಗೂ ಇವು ಒಂದು ಚಿತ್ರವನ್ನು ಕೊಡುತ್ತವೆ. ಮೂರನೆಯದು, ಹೆಣ್ಣಿನ ಆತ್ಮಕಥನಗಳು ಎಲ್ಲಿ ಯಾಕೆ ಭಿನ್ನವಾಗುತ್ತವೆ ಎನ್ನುವುದನ್ನೂ ಇವು ಧ್ವನಿಸುತ್ತವೆ ಎನ್ನುವುದಕ್ಕಾಗಿ

ಪುರುಷರ ಆತ್ಮಕಥನಗಳು 'ಆರೋಹಣ' ಪರ್ವದವಾದರೆ ಹೆಣ್ಣಿನ ಆತ್ಮಕಥನಗಳು 'ಅನಾವರಣ' ಪರ್ವದವು. ಬಹುತೇಕ ಪುರುಷ ಆತ್ಮಕಥನಗಳು, ಅರೆರೆ ಎನ್ನಯ ಸಮನಾರು ಎನ್ನುವ ಧರ್ತಿಯಲ್ಲಿ, ನೂರು ಕಷ್ಟಗಳ ನಡುವೆ ಸಾಧಿಸಿದ ಸಾಧನೆಯ ಜಯಮಾಲೆಗಳಾಗಿ, ಓದುಗರ ಮನಸ್ಸಿನಲ್ಲಿ ಒಂದು ಮಾದರಿ ವ್ಯಕ್ತಿತ್ವವಾಗಿ ಸ್ಥಾನ ಪಡೆಯುವ ಉಘೇ ಉಘೇ ಎಂದು ಜಯಕಾರ ಹಾಕಿಸಿಕೊಳ್ಳುವ ಗೆಲುವಿನ ಕಥನಗಳಾಗಿರುತ್ತವೆ. ಇಲ್ಲವೇ ಇನ್ನೊಂದು ಮಾದರಿಯಲ್ಲಿ ಓದುಗರ ಕರುಣೆಯ ಕೂಸುಗಳಾಗಿ ಉಳಿಯುವ ಕಥನಗಳಾಗಿರುತ್ತವೆ. ಇವುಗಳ ಪ್ರಮಾಣ ತೀರಾ ಕಡಿಮೆಯೆಂದೇ ಹೇಳಬೇಕು.